ತಿಳಿಯಬಹುದು. ನಾನು ಈಗಾಗಲೇ ಆ ಬಗ್ಗೆ ಸಂಬಂಧಪಟ್ಟವರ ಜೊತೆ ಮಾತನಾಡುತ್ತಿದ್ದೇನೆ, ಇವೊತ್ತೂ ಸಹ ಅದರ ಬಗ್ಗೆ ಮೀಟಿಂಗನ್ನು ಕರೆದಿದ್ದೇನೆ. ಆದರೆ ಇದನ್ನು ಸದನದಲ್ಲಿ ಹೇಳಬೇಕೆಂ ಎಂದರೆ ಈ ಕಾರ್ಖಾನೆಯು ಕೆಲಸ ಮಾಡುತ್ತಿಲ್ಲ ಅಥವಾ ಲುಕ್ಸಾನಾಗಿ ನಷ್ಟವನ್ನು ಅನುಭವಿಸುತ್ತಿದೆ ಎನ್ನುವ ಅಭಿಪ್ರಾಯ ಸರಿಯಲ್ಲ ಎಂದು ನನಗೆ ಬಂದಿರತಕ್ಕಂಥ ಮಾಹಿತಿ. ೧೯೮೭ರ ಏಪ್ರಿಲ್‌ನಿಂದ ಆಗಸ್ಟ್ ತಿಂಗಳವರೆಗೆ ೩೫೩ ಲಕ್ಷ ರೂಪಾಯಿಗಳ ಉತ್ಪಾದನೆಯಾಗಿದ್ದರೆ ೮೮ರಲ್ಲಿ ೩೫೬ ಲಕ್ಷ ರೂಪಾಯಿಗಳ ಉತ್ಪಾದನೆಯಾಗಿದೆ. ಮಾರಾಟ ದೃಷ್ಟಿಯಿಂದ ನೋಡಿದರೆ ಕಳೆದ ವರ್ಷ ೩೫೦ ಲಕ್ಷ ರೂಪಾಯಿಗಳ ಮಾರಾಟ ಆಗಿದ್ದರೆ ಈಗ ೩.೭೭ ಲಕ್ಷ ರೂಪಾಯಿಗಳ ಮಾರಾಟ ಆಗಿದೆ. ಇಲ್ಲಿರುವ ಸಂಗತಿಯ ಆಧಾರದ ಮೇಲೆ ಹೇಳುವುದಾದರೆ ಮಾನ್ಯ ಸದಸ್ಯರ ಅನುಮಾನ ಸರಿಯಲ್ಲ ಎಂದು ನನಗನ್ನಿಸುತ್ತದೆ. ಇನ್ನು ಪುನರ್‌ಸಜ್ಜೀಕರಣವನ್ನು ಕೇಂದ್ರದವರ ಸಹಾಯದಿಂದ ಮಾಡುವ ಬಗ್ಗೆ that plan is no under consideration and under implementation also. ಇದರ ಬಗ್ಗೆ ಬ್ಯಾಂಕಿಂಗ್‌ಗಳೊಡನೆ ವ್ಯವಹಾರ ನಡೆಯುತ್ತಿದೆ. ಬಂಡವಾಳ ಅಡಿಷನಲ್ ವರ್ಕಿಂಗ್ ಕ್ಯಾಪಿಟಲ್ ಬಗ್ಗೆ ಮಾತುಕತೆ ನಡೆದಿದೆ. ಅದು ಯಶಸ್ವಿಯಾದರೆ ಈ ಕಾರ್ಖಾನೆಯ ಆರೋಗ್ಯ ಹೆಚ್ಚು ಸುಧಾರಿಸುತ್ತದೆ.

ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯನ್ನು ವಹಿಸಿ ಕೊಂಡಕುರಿತು.

೪೧೯. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾವತಿಯ ವಿ. ಐ. ಎಸ್. ಎಲ್. ಕಾರ್ಖಾನೆಯನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾಕ್ಕೆ ವಹಿಸಂಬ ತೀರ್ಮಾನ ಯಾವ ಹಂತದಲ್ಲಿದೆ.

ಆ) ಮೇಲ್ಕಂಡ ಕಾರ್ಖಾನೆಯನ್ನು ವಹಿಸಿಕೊಳ್ಳಲು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ವಿಧಿಸಿರುವ ಷರತ್ತುಗಳೇನು?

ಇ) ಪ್ರಸ್ತುತ ಈ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಇಲಾಖೆ ಸಚಿವರು).—

ಅ) ಕೇಂದ್ರ ಸರ್ಕಾರದ ಉಕ್ಕು ಇಲಾಖೆಯು ಪರಿಶೀಲನೆಯಲ್ಲಿದೆ.

ಆ) ಅಂತಿಮ ತೀರ್ಮಾನ ಕೈಗೊಂಡಿಲ್ಲ.

ಇ) ಪ್ರಸ್ತುತ ೮೬೬ ಉದ್ಯೋಗಿಗಳು ಈ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮಂತ್ರಿಗಳು It is under the consideration of the Govt. of India ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಬೇಕಾದರೆ ಕರ್ನಾಟಕ ಸರ್ಕಾರದವರಿಂ ಈ ಟೇಕ್‌ಓವರ್ ಬಗ್ಗೆ ಏನಾದರೂ ಪ್ರಪೋಸಲ್ ಕಳುಹಿಸಿರಬೇಕು. ಅಂತಹ ಪ್ರಪೋಸಲ್ ಏನಾದರೂ ಕಳುಹಿಸಿದ್ದರೆ ಅವು ಯಾವುವು?

Secondly, what are the preliminary conditions the Government of India put-forth for the take over ?

Thirdly, whether the Government of Karnataka has agreed fo the reduction of workers. strength or voluntary retirement scheme Golden Shake Hands etc., whether Government of India has demanded for any such proposal ?

Fourthly, whether the Government of India demanded power to Bharath Gold Mines of Kolar. ಕೋಲಾರದ ಭಾರತ ಗೋಲ್ಡ್ ಮೈನ್ಸ್‌ಗೆ ಪವರ್ ಸಪ್ಲೈ ಮಾಡುವಂತಾದರೆ ಶಿವನಸಮುದ್ರದ ಪವರ್ ಪ್ಲಾಂಟ್‌ನಿಂದ ಮಾಡುವಂತೆ ಏನಾದರೂ ಮಿನಿಸ್ಟ್ರಿಯವರು ಕೇಳಿದ್ದಾರೆಯೇ?

ಶ್ರೀ ಜೆ. ಹೆಚ್. ಪಟೇಲ್. —ಸ್ಟೀಲ್ ಅಥಾರಟಿ ಆಫ್ ಇಂಡಿಯಾ ಅವರಿಗೆ ಈ ಕಾರ್ಖಾನೆಯನ್ನು ವಹಿಸಿಕೊಡುವ ಬಗ್ಗೆ ಕರ್ನಾಟಕ ಸರ್ಕಾರ ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಕಳೆದ ಒಂದೂವರೆ ವರ್ಷದಿಂದ ಅವರು ಹೇಳಿದ್ದ ಷರತ್ತುಗಳಿಗೆ ಅಂದರೆ ಬಹುತೇಕ ಷರತ್ತುಗಳಿಗೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಕಳೆದ ಎರಡು ತಿಂಗಳ ಕೆಳಗೆ ಸ್ಟೀಲ್ ಮಿನಿಸ್ಟರ್ ಅವರನ್ನು ಕಂಡು ತಿದಷ್ಟು ಬೇಗ ತೀರ್ಮಾನ ಮಾಡುವಂತೆ ಕೇಳಿದ್ದೇನೆ. ಅವರು ಬಹಳ ಸಿಂಪಥೆಟಿಕ್ ಆಗಿ ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದಾರೆ. ವರ್ಕರ್ಸ್ ಬಗ್ಗೆ ಗೋಲ್ಡನ್ ಶೇಕ್ ಪ್ರಾಂಡ್ ಬಗ್ಗೆ, ಒಂದು ಸಲ ''ಸೇಲ್'' ನವರು ವಿ. ಐ. ಎಸ್. ಎಲ್. ನವರು ತೆಗೆದುಕೊಂಡರೆ ಅದನ್ನು ಅವರೇ ಮಾಡುತ್ತಾರೆ. ಇದಕ್ಕಾಗಿ ೮-೯ ಕೋಟಿ ರೂಪಾಯಿಗಳಾದರೆ ರಾಜ್ಯಸರ್ಕಾರದವರು ಅರ್ಧ ಭಾಗ ''ಸೇಲ್''ನವರು ಅರ್ಧಭಾಗ ವಹಿಸಿಕೊಡಲು ಒಪ್ಪಿಕೊಂಡಿದ್ದೇವೆ ಪವರ್ ಬಗ್ಗೆ ಒಪ್ಪಿಕೊಂಡಿದ್ದೇವೆ. ವಿದ್ಯುಚ್ಛಕ್ತಿ ಬಾಕಿಯ ಬಗ್ಗೆ ಕೆಲವು ಕಂಡಿಷನ್‌ಗಳಿಗೆ ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎನ್. ಎಂ. ಅಡ್ಯಂತಾಯ್ಯ. —ಸುಮಾರು ೮ ಸಾವಿರ ಕಾರ್ಮಿಕರು...

ಅಧ್ಯಕ್ಷರು. —ನಾನು ಅವಕಾಶ ಕೊಡುವುದಿಲ್ಲ.

I have not allowed you. Whatever you say will not be recorded.

x x x

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಧ್ಯಕ್ಷರ ನೇಮಕ

೪೦೨೮. ಶ್ರೀ ಬಿ. ಎ. ಉಮರಬ್ಬ (ವಿಟ್ಲ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿಯನ್ನು ನೇಮಿಸುವ ವಿಚಾರ ಯಾವ ಹಂತದಲ್ಲಿದೆ ?

ಆ) ಅದು ಯಾವಾಗ ಕಾರ್ಯಗತಗೊಳ್ಳುತ್ತದೆ ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಸಚಿವರು).—

ಅ) ಮತ್ತು ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರ ನೇಮಕಾತಿ ಬಗ್ಗೆ ಇರುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಸರ್ಕಾರವು ಇದರ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನ ಕೈಗೊಳ್ಳುವುದು.

೧೨-೫೦ ಪಿ.ಎಂ.

ಅಧ್ಯಕ್ಷರು. —ಕ್ವೆಶ್ಚನ್ ಅವರ್ ಮುಗಿದ ಮೇಲೆ ೧೦ ಪ್ರಶ್ನೆ ಇತ್ತು. ೧೦ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದು ಬೇಡ ಎಂದು ಒಂದೇ ಒಂದು ಉಪ ಪ್ರಶ್ನೆ ಕೇಳಿ ಎಂದು ಹೇಳಿದ್ದೇನೆ.

ಶ್ರೀ ಎನ್. ಎಂ. ಅಡ್ಯಂತಾಯ. —ಇನ್ನು ಒಂದೇ ಒಂದು ಉಪ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು. —ಅವಕಾಶ ಕೊಡುವುದಿಲ್ಲ, ನಾನು ಯಾರಿಗೂ ಕೊಟ್ಟಿಲ್ಲ. ನಿಮಗೂ ಕೊಡುವುದಿಲ್ಲ.

---

xNot recorded as ordered by the Chair